**ಸಮಗ್ರ ಶಿಕ್ಷಣ - ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ,
ನೃಪತುಂಗ ರಸ್ತೆ, ಬೆಂಗಳೂರು-560001.

SSK/VE/OTH/4/2026-JDQA(e Office No: 109391) **ದಿನಾಂಕ:** 30.07.2026

# ಸುತ್ತೋಲೆ

**ವಿಷಯ:** 2026–27ನೇ ಸಾಲಿನ NSQF ಕೌಶಲ್ಯ ಶಿಕ್ಷಣ ಕಾರ್ಯಕ್ರಮದಡಿ ಶಾಲಾ ಹಂತದಲ್ಲಿ ನೇಮಕ ಮಾಡಿಕೊಂಡಿರುವ **ಕೃತಕ ಬುದ್ಧಿಮತ್ತೆ (AI) ಅತಿಥಿ ಶಿಕ್ಷಕರಿಗೆ** ಕಾರ್ಯಾದೇಶ ನೀಡುವ ಬಗ್ಗೆ.

**ಉಲ್ಲೇಖ:** 1. 2026-27ನೇ ಸಾಲಿನ ಪಿ.ಎ.ಬಿ ಅನುಮೋದನಾ ನಡವಳಿ ದಿನಾಂಕ:29.06.2026.

2. ಈ ಕಚೇರಿಯ ಪರಿಷ್ಕೃತ ಸಮ ಸುತ್ತೋಲೆ ಸಂಖ್ಯೆ: SSK/VE/OTH/4/2026-JDQA (e Office No: 109391), ದಿನಾಂಕ: 29.07.2026

ರಾಜ್ಯ ಸರ್ಕಾರದ ನಿರ್ದೇಶನ ಹಾಗೂ 2026–27ನೇ ಸಾಲಿನ ಪಿ.ಎ.ಬಿ. ಅನುಮೋದನೆಯನ್ವಯ **National Skills Qualifications Framework (NSQF)** ಅಡಿಯಲ್ಲಿ **Artificial Intelligence in Skill Education (AI)** ವಿಷಯವನ್ನು ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

2026–27ನೇ ಶೈಕ್ಷಣಿಕ ವರ್ಷದಲ್ಲಿ **ಹೊಸದಾಗಿ ಅನುಮೋದಿತ 1180 ಸರ್ಕಾರಿ ಪ್ರೌಢಶಾಲೆಗಳು, 381 NSQF Functional ಶಾಲೆಗಳು, 81 ಚಾಲ್ತಿಯಲ್ಲಿರುವ Single Sector ಶಾಲೆಗಳು ಹಾಗೂ 158 PM SHRI ಶಾಲೆಗಳು ಸೇರಿದಂತೆ ಒಟ್ಟು 1800 ಶಾಲೆಗಳ 9ನೇ ತರಗತಿಯಲ್ಲಿ** Artificial Intelligence in Skill Education (AI) ವಿಷಯವನ್ನು ಅನುಷ್ಠಾನಕ್ಕೆ ತರಲಾಗಿದೆ.

ಈ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಶಾಲಾ ಮಟ್ಟದಲ್ಲಿ ರಚಿಸಲಾದ ಆಯ್ಕೆ ಸಮಿತಿಯ ಮೂಲಕ ಪಾರದರ್ಶಕವಾಗಿ ಅರ್ಜಿಗಳನ್ನು ಆಹ್ವಾನಿಸಿ, ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆ, ಅನುಭವ, ಮೂಲ ದಾಖಲೆಗಳು ಹಾಗೂ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳನ್ನು ಪರಿಶೀಲಿಸಿ, ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ. ಸದರಿ ಆಯ್ಕೆಪಟ್ಟಿಯನ್ನು ಸಂಬಂಧಿಸಿದ ಸಮಿತಿಯ ಸದಸ್ಯರ ಸಹಿ ಪಡೆದು ಶಾಲಾ SDMC ಸಮಿತಿಯ ಶಿಫಾರಸ್ಸು ಮೇರೆಗೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಯಮಾನುಸಾರ ಪರಿಶೀಲಿಸಿ ಅನುಮೋದನೆ ನೀಡಿರುತ್ತಾರೆ.

ಆದ್ದರಿಂದ, **ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮೋದನೆ ಪಡೆದಿರುವ ಆಯ್ಕೆಯಾದ ಕೃತಕ ಬುದ್ಧಿಮತ್ತೆ (AI) ಅತಿಥಿ ಶಿಕ್ಷಕರನ್ನು ದಿನಾಂಕ: 01.08.2026 ರಿಂದ ಸಂಬಂಧಿಸಿದ ಶಾಲೆಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸಿ ಈ ಮೂಲಕ ಕಾರ್ಯಾದೇಶ ನೀಡಲಾಗಿದೆ.**

ಆಯ್ಕೆಯಾದ ಎಲ್ಲಾ AI ಅತಿಥಿ ಶಿಕ್ಷಕರು **ದಿನಾಂಕ: 01.08.2026 ರಂದು ಸಂಬಂಧಿಸಿದ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು/ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರವರ ಬಳಿ ಕಡ್ಡಾಯವಾಗಿ ಕರ್ತವ್ಯದ ಮೇಲೆ ಹಾಜರಾಗುವುದು.** ಅಂದಿನಿಂದಲೇ ಕೃತಕ ಬುದ್ಧಿಮತ್ತೆ (Artificial Intelligence - AI) ವಿಷಯದ ಬೋಧನಾ ಕಾರ್ಯವನ್ನು ಪ್ರಾರಂಭಿಸತಕ್ಕದ್ದು.

❖ **ನಿಯೋಜನೆಯ ಷರತ್ತುಗಳು:**

1. ಆಯ್ಕೆಯಾದ AI ಅತಿಥಿ ಶಿಕ್ಷಕರು **01.08.2026** ರಂದು ಸಂಬಂಧಿಸಿದ ಶಾಲೆ/ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ BEO ರವರಿಗೆ ವರದಿ ನೀಡುವುದು.
2. ಶಾಲಾ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರ ವರದಿಗಳನ್ನು ಕ್ರೋಢೀಕರಿಸಿ, **ಕ್ಷೇತ್ರ ಶಿಕ್ಷಣಾಧಿಕಾರಿಗಳು, DPO/DYPC** ರವರಿಗೆ ಸಲ್ಲಿಸತಕ್ಕದ್ದು.
3. AI ಅತಿಥಿ ಶಿಕ್ಷಕರು ಇಲಾಖೆಯಿಂದ ಅನುಮೋದಿಸಲಾದ ಪಠ್ಯಕ್ರಮದಂತೆ AI, Python Programming, Data, Computer Vision, Natural Language Processing (NLP), Generative AI ಹಾಗೂ ಇತರೆ ಪ್ರಾಯೋಗಿಕ ಚಟುವಟಿಕೆಗಳನ್ನು ಬೋಧಿಸಬೇಕು.
4. ವಿದ್ಯಾರ್ಥಿಗಳ ದಾಖಲಾತಿ, ಹಾಜರಾತಿ, ಕಲಿಕಾ ಪ್ರಗತಿ, ಮೌಲ್ಯಮಾಪನ, ಪ್ರಾಜೆಕ್ಟ್ ಕಾರ್ಯಗಳು ಹಾಗೂ ಇತರೆ ದಾಖಲಾತಿಗಳನ್ನು ನಿಯಮಾನುಸಾರ ನಿರ್ವಹಿಸಬೇಕು.
5. ಇಲಾಖೆಯು ಆಯೋಜಿಸುವ **Induction Training/Orientation Programme** ಹಾಗೂ ಇತರೆ ತರಬೇತಿಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು.
6. AI ಪ್ರಯೋಗಾಲಯ, ಕಂಪ್ಯೂಟರ್, ಇಂಟರ್ನೆಟ್ ಹಾಗೂ ಇಲಾಖೆಯಿಂದ ಒದಗಿಸಲಾಗುವ ಉಪಕರಣಗಳನ್ನು ಸಮರ್ಪಕವಾಗಿ ಬಳಸಿಕೊಂಡು ಗುಣಮಟ್ಟದ ಬೋಧನೆ ನಡೆಸಬೇಕು.
7. ಆಯ್ಕೆಯಾದ AI ಅತಿಥಿ ಶಿಕ್ಷಕರಿಗೆ ಇಲಾಖೆಯ ಅನುಮೋದಿತ ಮಾನದಂಡಗಳಂತೆ **ಪ್ರತಿ ತಿಂಗಳು ರೂ.20,000/- (ರೂಪಾಯಿ ಇಪ್ಪತ್ತು ಸಾವಿರ ಮಾತ್ರ)** ಗೌರವಧನವನ್ನು, ಹಾಜರಾತಿ ಹಾಗೂ ಕಾರ್ಯತೃಪ್ತಿಕರ ಸೇವೆಯ ಆಧಾರದ ಮೇಲೆ ಮುಖ್ಯ ಶಿಕ್ಷಕರು ಸಂಬಂಧಿಸಿದ ಅತಿಥಿ ಶಿಕ್ಷಕರ ಬ್ಯಾಂಕ್ ಖಾತೆಗೆ ಜಮಾ ಮಾಡುವುದು.
8. ಅನಧಿಕೃತ ಗೈರುಹಾಜರಾತಿ, ಕರ್ತವ್ಯ ಲೋಪ ಅಥವಾ ಇಲಾಖೆಯ ಸೂಚನೆಗಳ ಉಲ್ಲಂಘನೆ ಕಂಡುಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಂಡು, ಅಗತ್ಯವಿದ್ದಲ್ಲಿ ನಿಯೋಜನೆಯನ್ನು ರದ್ದುಗೊಳಿಸಬಹುದು.

9. ನಕಲಿ ದಾಖಲೆಗಳು, ತಪ್ಪು ಮಾಹಿತಿ ಅಥವಾ ಅನರ್ಹತೆ ಕಂಡುಬಂದಲ್ಲಿ ಈ ಕಾರ್ಯಾದೇಶವನ್ನು ಯಾವುದೇ ಪೂರ್ವ ಸೂಚನೆ ಇಲ್ಲದೆ ರದ್ದುಗೊಳಿಸಿ ಸಂಬಂಧಿಸಿದ ಅಭ್ಯರ್ಥಿಯ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
10. ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವಾಗ ಉತ್ತಮ ಗುಣ ಮತ್ತು ನಡತೆ ಹೊಂದಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದು.

❖ **ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರಿಗೆ ಸೂಚನೆಗಳು**

1. AI ಅತಿಥಿ ಶಿಕ್ಷಕರು **01.08.2026** ರಂದು ಶಾಲಾ ಕರ್ತವ್ಯದ ಮೇಲೆ ಹಾಜರಾದ ವರದಿಯನ್ನು ಅದೇ ದಿನವೇ ಸಂಬಂಧಿಸಿದ ಬ್ಲಾಕಿನ BEO ರವರಿಗೆ ಸಲ್ಲಿಸುವುದು.
2. AI ವಿಷಯದ ಬೋಧನೆಗೆ ಅಗತ್ಯವಿರುವ ಕಂಪ್ಯೂಟರ್, ಇಂಟರ್ನೆಟ್ ಸಂಪರ್ಕ, AI ಪ್ರಯೋಗಾಲಯ ಹಾಗೂ ಇತರೆ ಮೂಲಸೌಕರ್ಯಗಳನ್ನು ಲಭ್ಯವಾಗುವಂತೆ ಕ್ರಮವಹಿಸಬೇಕು.
3. AI ಅತಿಥಿ ಶಿಕ್ಷಕರ ಹಾಜರಾತಿ, ಬೋಧನಾ ಕಾರ್ಯ, ವಿದ್ಯಾರ್ಥಿಗಳ ಕಲಿಕಾ ಪ್ರಗತಿ ಹಾಗೂ ಪಠ್ಯಕ್ರಮದ ಅನುಷ್ಠಾನವನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು.
4. AI ಅತಿಥಿ ಶಿಕ್ಷಕರಿಗೆ ಪ್ರತ್ಯೇಕ ಹಾಜರಾತಿ ಪುಸ್ತಕವನ್ನು ನಿರ್ವಹಿಸುವುದು.

❖ **ಕ್ಷೇತ್ರ ಶಿಕ್ಷಣಾಧಿಕಾರಿಗಳು (BEO) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳಿಗೆ ಸೂಚನೆಗಳು:**

1. ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಲ್ಲಿ AI ಅತಿಥಿ ಶಿಕ್ಷಕರು **01.08.2026** ರಿಂದ ಕರ್ತವ್ಯಕ್ಕೆ ಹಾಜರಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.
2. ಜಿಲ್ಲಾ ಉಪನಿರ್ದೇಶಕರು (ಆಡಳಿತ)/DPO/DYPC ರವರು ಶಾಲೆಗಳಿಗೆ ನಿಯಮಿತವಾಗಿ ಭೇಟಿ ನೀಡಿ AI ಕಾರ್ಯಕ್ರಮದ ಅನುಷ್ಠಾನ, ಬೋಧನಾ ಕಾರ್ಯ ಹಾಗೂ ತರಬೇತುದಾರರ ಕಾರ್ಯನಿರ್ವಹಣೆಯನ್ನು ಪರಿಶೀಲಿಸಬೇಕು.
3. ಎಲ್ಲಾ ಶಾಲೆಗಳ AI ಅತಿಥಿ ಶಿಕ್ಷಕರ ನಿಯೋಜನೆ ಪೂರ್ಣಗೊಂಡಿರುವ ಕುರಿತು ಜಿಲ್ಲಾ ಮಟ್ಟದ ಕ್ರೋಢೀಕೃತ ವರದಿಯನ್ನು ರಾಜ್ಯ ಕಚೇರಿಗೆ ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕು.

ಸಂಬಂಧಿಸಿದ ಎಲ್ಲಾ **ಕ್ಷೇತ್ರ ಶಿಕ್ಷಣಾಧಿಕಾರಿಗಳು (BEO), ಜಿಲ್ಲಾ ಉಪನಿರ್ದೇಶಕರು (ಆಡಳಿತ), DPO/DYPC, ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು ಹಾಗೂ AI ಅತಿಥಿ ಶಿಕ್ಷಕರು** ಈ ಕಾರ್ಯಾದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, **Artificial Intelligence in Skill**

**Education (AI)** ಕಾರ್ಯಕ್ರಮವನ್ನು ಗುಣಮಟ್ಟದೊಂದಿಗೆ ಹಾಗೂ ಪರಿಣಾಮಕಾರಿಯಾಗಿ ಶಾಲಾ ಹಂತದಲ್ಲಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

**ರಾಜ್ಯ ಯೋಜನಾ ನಿರ್ದೇಶಕರು**

ಸಮಗ್ರ ಶಿಕ್ಷಣ ಕರ್ನಾಟಕ-ಬೆಂಗಳೂರು

**ಪ್ರತಿಯನ್ನು:**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಹಾಗೂ (ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಪದವಿಪೂರ್ವ ಕಾಲೇಜು ಪ್ರಾಂಶುಪಾಲರು ಇವರಿಗೆ ಅಗತ್ಯ ಮಾಹಿತಿಗಾಗಿ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಉಪಯೋಜನಾ ಸಮನ್ವಯಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ BEO ರವರಿಗೆ ಅಗತ್ಯ ಕ್ರಮಕ್ಕಾಗಿ.
5. ಶಾಲಾ/ಕಾಲೇಜುಗಳ ಮುಖ್ಯಶಿಕ್ಷಕರು/ಪ್ರಾಂಶುಪಾಲರಿಗೆ, ಅಗತ್ಯ ಕ್ರಮಕ್ಕಾಗಿ
6. ಕಛೇರಿ ಪ್ರತಿ.